# ISC SEMESTER 2 EXAMINATION
# SPECIMEN QUESTION PAPER
# KANNADA

---

***Maximum Marks: 40***

***Time allowed: One and a half hour***

*Candidates are allowed an additional **10 minutes** for **only** reading the paper.*

*They must **Not** start writing during this time.*

---

*Answer **Questions 1 and 2 in Section A** and **three** questions from **Section B** on **any three** out of the four prescribed textbooks.*

*The intended marks for questions or parts of questions are given in brackets. [ ]*

---

## SECTION A
## LANGUAGE - 19 MARKS

**Question 1** **[12]**

**Write a composition in approximately 300-350 words in Kannada on any *one* of the topics given below:**

**ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆರಿಸಿ 300–350 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

(i) ಸ್ವಚ್ಛತೆಗೆ ಆದ್ಯತೆ ನೀಡಿದರೆ ಅಪಾಯಕಾರಿ ಸಾಂಕ್ರಾಮಿಕ ರೋಗಗಳಿಂದ ದೂರವಿರಲು ಸಾಧ್ಯ – ಎಂದು ಚರ್ಚಿಸುತ್ತಾ ಒಂದು ಪ್ರಬಂಧ ಬರೆಯಿರಿ.

(ii) ಶಿಕ್ಷಣದಲ್ಲಿ ಯೋಗಾಭ್ಯಾಸದ ಮಹತ್ವ – ಈ ಕುರಿತಾಗಿ ವಿವರಿಸುತ್ತಾ ಒಂದು ಪ್ರಬಂಧ ಬರೆಯಿರಿ.

(iii) ನಿಮ್ಮ ಜೀವನದ ಆದರ್ಶ ವ್ಯಕ್ತಿ, ಅವರು ಮಾಡಿದ ಸಾಧನೆಗಳು, ಸೇವೆಗಳ ಬಗ್ಗೆ ವಿವರಿಸಿ.

(iv) ಭಾರತೀಯ ಸೈನ್ಯ ವ್ಯವಸ್ಥೆಯ ಬಗ್ಗೆ ಅನಿಸಿಕೆ ಅಭಿಪ್ರಾಯಗಳನ್ನು ವಿವರಿಸುತ್ತಾ ಒಂದು ಪ್ರಬಂಧ ಬರೆಯಿರಿ.

(v) 'ಸಮಯ ಪಾಲನೆಯಿಂದ ನಾವು ಅಂದುಕೊಂಡ ಗುರಿಯನ್ನು ಸಾಧಿಸಬಹುದು, ಎಂಬುದನ್ನು ವಿವರಿಸುತ್ತಾ ಒಂದು ಪ್ರಬಂಧ ಬರೆಯಿರಿ.

(vi) ಕೆಳಗೆ ನೀಡಲಾಗಿರುವ ಯಾವುದಾದರೊಂದು ವಿಷಯದ ಬಗ್ಗೆ ಮೂಲ ಕಥೆ ಬರೆಯಿರಿ.

(a) 'ಸೋಲೇ ಗೆಲುವಿನ ಸೋಪಾನ' ಈ ಹೇಳಿಕೆಯನ್ನು ಬಿಂಬಿಸುವ ಸ್ವಕಲ್ಪಿತ ಕತೆಯನ್ನು ಬರೆಯಿರಿ.

(b) ...ಆ ನೋವು ಸದಾ ನನ್ನನ್ನು ಕಾಡುತ್ತಿರುತ್ತದೆ ಎಂದು ಮುಕ್ತಾಯವಾಗುವ ಒಂದು ಕಥೆ ಬರೆಯಿರಿ.

**Question 2**

**Do as directed.**

**ಸೂಚನೆಗಳಿಗನುಸಾರವಾಗಿ ಉತ್ತರಿಸಿ.**

(i) ಕೊಟ್ಟಿರುವ ಗಾದೆಯ ಅರ್ಥ ಬರೆಯಿರಿ. – ಶಕ್ತಿಗಿಂತ ಯುಕ್ತಿ ಮೇಲು. **[1]**

(ii) ವಾಕ್ಯಕ್ಕೆ ಸರಿಹೊಂದುವ ಗಾದೆ ಬರೆಯಿರಿ. **[1]**

ಯಾವ ಯೋಚನೆಯಿಲ್ಲದವನಿಗೆ ಎಲ್ಲಿ ಮಲಗಿದರೂ ನಿದ್ದೆ ಬರುವುದು.

(a) ಚಿಂತೆಯೇ ಮುಪ್ಪು ಸಂತೋಷವೇ ಯೌವನ.

(b) ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ.

(c) ನಾಳೆ ಎಂದವನ ಮನೆ ಹಾಳು.

(d) ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ.

(iii) ಕೆಳಗಿನ ಗಾದೆಯನ್ನು ಪೂರ್ಣಗೊಳಿಸಿ. **[1]**

ಅಜ್ಜಿ ಇಲ್ಲದ ಮನೆ ________ __________

(iv) **'ಕಾಲುಕೀಳು'** – ಈ ನುಡಿಗಟ್ಟನ್ನು ವಾಕ್ಯದಲ್ಲಿ ಬಳಸಿರಿ. **[1]**

(v) ಕೆಳಗಿನ ವಾಕ್ಯವನ್ನು ಸರಿಪಡಿಸಿ ಬರೆಯಿರಿ. **[1]**

ಹಕ್ಕಿಗಳು ಆಹಾರ ಸಂಪಾದಿಸಲು ಗೂಡನ್ನು ಹಾರಿಹೋದವು.

(vi) ಕೆಳಗಿನವುಗಳಲ್ಲಿ ತಪ್ಪಾದ ವಾಕ್ಯದ ಭಾಗವನ್ನು ಗುರುತಿಸಿ. **[1]**

(a) ಮಾನವ ಮತ್ತು

(b) ಮರಗಳ ಮೇಲೆ

(c) ಪ್ರಾಣಿಗಳ ಜೀವನವನ್ನು

(d) ಅವಲಂಬಿತವಾಗಿದೆ.

(vii) ಕೆಳಗಿನವುಗಳಲ್ಲಿ ಸರಿಯಾದ ವಾಕ್ಯವನ್ನು ಗುರುತಿಸಿ. **[1]**

(a) ನಾಣ್ಯಸಂಗ್ರಹವು ಉತ್ತಮ ಹವ್ಯಾಸಗಳಿಗೆ ಒಂದಾಗಿದೆ.

(b) ನಾಣ್ಯಸಂಗ್ರಹವು ಉತ್ತಮ ಹವ್ಯಾಸಗಳಲ್ಲಿ ಒಂದಾಗಿದೆ.

(c) ನಾಣ್ಯಸಂಗ್ರಹದಿಂದ ಉತ್ತಮ ಹವ್ಯಾಸಗಳು ಒಂದಾಗಿದೆ.

(d) ನಾಣ್ಯಸಂಗ್ರಹವನ್ನು ಉತ್ತಮ ಹವ್ಯಾಸವು ಒಂದಾಗಿದೆ.

## SECTION B

## LITERATURE – 21 MARKS

*Answer **three** questions from this section on **any three** out of the four prescribed textbooks.*

*ನಿಗದಿತ ನಾಲ್ಕು ಪಠ್ಯಪುಸ್ತಕಗಳಲ್ಲಿ ಯಾವುದಾದರೂ ಮೂರರಲ್ಲಿ ಈ ವಿಭಾಗದಿಂದ ಮೂರು ಪ್ರಶ್ನೆಗಳಿಗೆ ಉತ್ತರಿಸಿ.*

### ಕನ್ನಡ ಕಿರಣ [KANNADA KIRANA]

**Question 3**

(i) ಹದಿನೈದನೇ ಶತಮಾನದಲ್ಲಿ ಭಾರತದಲ್ಲಿ ಜಂಭೋಜಿ ಮಹಾರಾಜರು ವಿಷ್ಣೋಯಿ ಪಂಥವನ್ನು ಪ್ರಾರಂಭಿಸಿದರು.

(a) ಜಂಭೋಜಿಯವರ ಆತ್ಮಾನುಶಾಸನದ ಎರಡು ನಿಯಮಗಳೇನು? **[1]**

(b) 1730 ರಲ್ಲಿ ಜೋಧಪುರದ ರಾಜನಾಗಿದ್ದವನು ಯಾರು ? ಅವನು ತನ್ನ ಕೆಲಸಗಾರರಿಗೆ ಏನೆಂದು ಆಜ್ಞೆ ಮಾಡಿದ? **[2]**

(c) ಮಾನವ ಪ್ರಕೃತಿಯೊಂದಿಗಿರುವ ಮೂರು ಪ್ರಕಾರದ ಸಂಬಂಧಗಳಾವುವು ? **[4]**

**ಅಥವಾ (OR)**

(ii) ಅತ್ತೆ ಮಾವಂದಿರು ಅನುಮತಿ ಕೊಡಲು ಸಾವಿತ್ರಿಯು ಸಂತೋಷದಿಂದ ನಗುತ್ತ ಒಳಗೆ ಹೃದಯದಲ್ಲಿ ನೋಯುತ್ತಾ, ಗಂಡನೊಡನೆ ಹೊರಟಳು.

(a) ಯಮನ ರೂಪ ಹೇಗಿತ್ತು ? **[1]**

(b) ಸಾವು ಸಮೀಪಿಸಿದ ಸಂದರ್ಭದಲ್ಲಿ ಸತ್ಯವಂತನಿಗೆ ಉಂಟಾದ ನೋವು ಹೇಗಿತ್ತು? ವಿವರಿಸಿ. **[2]**

(c) ಸಾವಿತ್ರಿಯ ಯಾವ ಮಾತುಗಳು ಯಮನಿಗೆ ಬಾಯಾರಿದವನಿಗೆ ಕೊಟ್ಟ ನೀರಿನಂತಿದೆ ಎಂದನು? **[4]**

## ಕಾವ್ಯ ಸುಧೆ (KAVYA SUDHE)

**Question 4**

(i) ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಬಕುತಿಯಿಲ್ಲ.

(a) ಡಾಂಭಿಕ ಭಕ್ತನು ಹೇಗೆ ತನ್ನ ತೋರಿಕೆಯ ಭಕ್ತಿಯಿಂದ ಎಲ್ಲರನ್ನು ಆಶ್ಚರ್ಯಗೊಳಿಸುತ್ತಾನೆ? **[1]**

(b) ಡಾಂಭಿಕ ಭಕ್ತನ ಘನ ಪೂಜೆ ಹೇಗಿರುತ್ತದೆ ? **[2]**

(c) ತನ್ನ ಹೊಟ್ಟೆಪಾಡಿಗಾಗಿ ಆತನು ತೋರಿಸುವ ಭಕ್ತಿಯ ಬಗ್ಗೆ ವಿವರಿಸಿ. **[4]**

**ಅಥವಾ (OR)**

(ii) ಈ ದೇಶವನ್ನು ಅರಿಯಬೇಕೆಂದರೆ
ನೀವು ಎರಡನೇ ದರ್ಜೆಯ ರೈಲಿನಲ್ಲೊಮ್ಮೆ
ಪ್ರಯಾಣಿಸಿ, ಕಿಟಕಿಗಳು ತೆರೆದಿರಲಿ.

(a) ನಾಗರಿಕತೆಯ ಜೀವನಾಡಿ ಯಾವುದು ? ಅದು ನಮಗೆ ಏನನ್ನು ಬಿತ್ತರಿಸುತ್ತದೆ? **[1]**

(b) ರೈಲಿನ ನಿಲ್ದಾಣದಲ್ಲಿ ಜನರು ಏಕೆ ಮೂಗು ಹಿಡಿದು ಕುಳಿತು ಕೊಳ್ಳುತ್ತಾರೆ? **[2]**

(c) ರೈಲಿನ ಅಂತರಂಗದಲ್ಲಿ ಸಿಗುವ ಮೋಸದಾಟದ ಮೋಜುಗಳೇನು? **[4]**

## ಪ್ರೇಮಭಿಕ್ಷು (PREMA BHIKSHU)

**Question 5**

(i) ಆಗ ನನಗೆ ಏಳೋ ಎಂಟೋ ವರ್ಷ , ನಮ್ಮ ಅರಮನೆಯ ಉದ್ಯಾನವನದಲ್ಲಿ ಉಳಿದ ಹುಡುಗರ ಜತೆ ಆಟ ಆಡುತ್ತಿದ್ದೆ.

(a) ನೆಲದ ಮೇಲೆ ಚೀರುತ್ತಾ ಬಿದ್ದ ಪಕ್ಷಿ ಯಾವುದು ? ಅದನ್ನು ಹೊಡೆದವರು ಯಾರು ? **[1]**

(b) ಹೆಣದ ಬಗ್ಗೆ ಸಿದ್ದಾರ್ಥನು ಕೇಳಿದ ಪ್ರಶ್ನೆಗೆ ಚೆನ್ನನ ಉತ್ತರವೇನಾಗಿತ್ತು ? **[2]**

(c) ಚೆನ್ನಜ್ಜನು ಸಿದ್ದಾರ್ಥನಿಗೆ ಅವನ ಹುಟ್ಟಿನ ರಹಸ್ಯದ ಬಗ್ಗೆ ಹೇಳಿದುದೇನು ? **[4]**

**ಅಥವಾ (OR)**

(ii) ಶ್ರಾವಸ್ತಿಯ ಹೊರಗಿನ ಉಪವನದಲ್ಲಿಯೂ ಬೆಳಗಾಯಿತು. ಭಿಕ್ಷುಸಂಘದ ಎಲ್ಲಾ ಸಾಧುಗಳೂ ಕುಳಿತ್ತಿದ್ದರು. ಅನೇಕ ಜನ ಗೃಹೀಭಕ್ತರೂ ಕುಳಿತ್ತಿದ್ದರು.

(a) ಭಿಕ್ಷು ಸಂಘದ ಸಾಧುಗಳೂ, ಗೃಹೀಭಕ್ತರೂ ಬುದ್ಧನ ಬರುವಿಕೆಗಾಗಿ ಹೇಗೆ ಮೊರೆಯಿಡುತ್ತಿದ್ದರು ? **[1]**

(b) ನಮ್ಮನ್ನು ದಾರಿ ತಪ್ಪಿಸಿ ಬೇರೆಡೆ ಸೆಳೆಯುವ ಮೂರು ಪ್ರಬಲ ಪ್ರವಾಹಗಳಾವುವು ? ಇವುಗಳನ್ನು ಹೇಗೆ ಹೋಗಲಾಡಿಸಬೇಕು ? **[2]**

(c) ಮಾಲುಂಕ್ಯ ಪುತ್ರನೆಂಬ ಶಿಷ್ಯನ ಮನಸ್ಸಿನ ಸಂಶಯಗಳಾವುವು ? ಅವನ್ನು ಬುದ್ಧನು ಹೇಗೆ ನಿವಾರಿಸಿದನು ? **[4]**

## ಹೆಬ್ಬೆರಳು (HEBBERALU)

**Question 6**

(i) ಏಕಿದೆಲ್ಲಾ ಕಾಟ ? ಏಕೆ ಬಗೆ ಬಗೆಯಾಟ ?
ಸಾಲದೆ ನಾವುಂಬ ಖಗಗಳಂ ಮಿಗಗಳಂ

(a) ಸಾಲದೇಂ ಕಂದ ಹಾವಿನ ಬಿಲದ ಬಳಿಗೆಯ್ದಿ ಸೋದೆಯನ್ನೂದಿದುದೆ ? **[1]**

ಈ ಮಾತನ್ನು ಯಾರು ಯಾರಿಗೆ ಹೇಳಿದರು ?

(b) ಮಣ್ಣಿನ ಗೊಂಬೆಯ ಮುಂದೆ ತನ್ನಲ್ಲೆ ಮಾತನಾಡಿಕೊಳ್ಳುವ ಏಕಲವ್ಯನ ಬಗ್ಗೆ ಹಿರಣ್ಯಧನು ಏನು ಹೇಳುತ್ತಾನೆ ? **[2]**

(c) ಹಿರಣ್ಯಧನುವಿನ ದುಃಖದ ಮಾತಿಗೆ ಗೊಂದಳದವರ ಉತ್ತರವೇನು ? **[4]**

**ಅಥವಾ (OR)**

(ii) ಅಕಟ ಭಾಸಿಪುದು ಭಾರತಭೂ ಭವಿಷ್ಯವತಿ
ಘೋರಾಂಧಕಾರಮಯವಾಗಿ ।

(a) ತಮ್ಮಡಿಯ ಶಿಷ್ಯನೆನೆ ಇನ್ನಾನನರ್ಹನೆಂ – ಈ ಮಾತನ್ನು ಯಾರು ಯಾರಿಗೆ ಹೇಳಿದರು ? **[1]**

(b) ಜೋಲು ಮೋರೆ ಹಾಕಿ ಬಂದ ಪಾರ್ಥನನ್ನು ನೋಡಿ ದ್ರೋಣಾಚಾರ್ಯರು ಹೇಳಿದ್ದೇನು? **[2]**

(c) ದ್ರೋಣಾಚಾರ್ಯರೇ ಏಕಲವ್ಯನ ಗುರು ಎಂದು ಅರ್ಜುನನು ಹೇಳಿದಾಗ ಅದಕ್ಕೆ ಗೊಂದಳದವರ ಉತ್ತರವೇನಾಗಿತ್ತು ? **[4]**